

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16-10-2020** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ತಿಲಾವತ್ ಮಾಡಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸುವ ಸಹಾಬಿಯ ಹೆಸರು ಹಝ್ರತ್ ಮುಅವ್ವಿಧ್ ಬಿನ್ ಹಾರಿಸ್ ರಝಿಯಲ್ಲಾಹು ಅನ್‌ಹು ಎಂದಾಗಿದೆ. ಹಝ್ರತ್ ಮುಅವ್ವಿಧ್‌ರ ಸಂಬಂಧ ಅನ್ಸಾರ್ ಗೋತ್ರವಾದ ಖಝ್‌ರಜ್‌ನೊಂದಿಗೆ ಆಗಿತ್ತು. ಹಝ್ರತ್ ಮುಆಧ್(ರ) ಮತ್ತು ಹಝ್ರತ್ ಔಫ್(ರ) ಇವರ ಸಹೋದರರಾಗಿದ್ದರು. ಈ ಮೂವರನ್ನು ಬನೂ ಅಫ್‌ರ ಎಂದೂ ಕರೆಯಲಾಗುತ್ತಿತ್ತು. ಹಝ್ರತ್ ಮುಅವ್ವಿಧ್(ರ) ಎಪ್ಪತ್ತು ಅನ್ಸಾರರೊಂದಿಗೆ ಬೈಅತ್ ಅಖಬ ಸಾನಿಯದಲ್ಲಿ ಇದ್ದರು ಎಂದು ಇಬ್ನು ಇಸ್‌ಹಾಖ್ ವರದಿ ಮಾಡಿರುವರು. ಹಝ್ರತ್ ಮುಅವ್ವಿಧ್(ರ)ರಿಗೆ ತನ್ನ ಎರಡು ಸಹೋದರರಾದ ಹಝ್ರತ್ ಮುಆಧ್ ಮತ್ತು ಹಝ್ರತ್ ಔಫ್‌ರೊಂದಿಗೆ ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸೌಭಾಗ್ಯ ಲಭಿಸಿತ್ತು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: 'ಅಬೂ ಜಹಲಿನ ಸ್ಥಿತಿಯೇನೆಂದು ಯಾರು ಹೋಗಿ ನೋಡುವರು? ಎಂದು ಬದ್ರ್ ಯುದ್ಧದಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು. ಹಝ್ರತ್ ಇಬ್ನು ಮಸ್‌ಊದ್(ರ) ಹೋದರು. ಅಫ್‌ರಾರ ಎರಡು ಮಕ್ಕಳು ಖಡ್ಗಗಳಿಂದ ತೀವ್ರವಾಗಿ ಹಲ್ಲೆ ನಡೆಸಿದ್ದ ಕಾರಣದಿಂದ ಅಬೂಜಹಲ್ ಮರಣದ ಸಮೀಪಕ್ಕೆ ತಲುಪಿದ್ದಾಗಿ ಇಬ್ನು ಮಸ್‌ಊದ್(ರ) ನೋಡಿದರು. ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಅವರ ತಲೆಯನ್ನು ದೇಹದಿಂದ ಬೇರ್ಪಡಿಸಿದ್ದರು. ಬದ್ರ್ ಯುದ್ಧದ ವೇಳೆ ಹಝ್ರತ್ ಮುಅವ್ವಿದ್(ರ) ಯುದ್ಧ ಮಾಡುತ್ತಾ ಹುತಾತ್ಮರಾದರು. ಅವರನ್ನು ಅಬೂ ಮುಸಾಫಹ್ ಶಹೀದ್ ಮಾಡಿದ್ದನು.

ಪ್ರಸ್ತಾಪಿಸಲಾಗುವ ಮುಂದಿನ ಸಹಾಬಿಯ ಹೆಸರು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್ ರಝಿಯಲ್ಲಾಹು ಅನ್‌ಹು ಎಂದಾಗಿದೆ. ಹಝ್ರತ್ ಉಬಯ್ಯ್ ಅನ್ಸಾರ್ ಗೋತ್ರವಾದ ಖಝ್‌ರಜಿನ ಶಾಖೆ ಬನೂ ಮುಆವಿಯಾದವರಾಗಿದ್ದರು. ಹಝ್ರತ್ ಉಬಯ್ಯ್(ರ) ಮಧ್ಯಮ ಎತ್ತರದ ವ್ಯಕ್ತಿಯಾಗಿದ್ದರು. ಅವರು ಇಸ್ಲಾಮಿನ ಆಗಮನಕ್ಕೆ ಮುಂಚೆಯೇ ಓದು ಬರಹ ತಿಳಿದಿದ್ದ ವ್ಯಕ್ತಿಯಾಗಿದ್ದರು. ಅವರಿಗೆ ಹಝ್ರತ್ ಪೈಗಂಬರ್(ಸ)ರಿಗೆ ಅವತೀರ್ಣವಾಗುತ್ತಿದ್ದ ಪವಿತ್ರ ಖುರ್‌ಆನಿನ ವಚನಗಳನ್ನು ಬರೆಯುವ ಸೌಭಾಗ್ಯ ಲಭಿಸಿತ್ತು. 'ನನ್ನ ಉಮ್ಮತ್ತಿನ ಅತ್ಯಂತ ಶ್ರೇಷ್ಠ ಖಾರಿ ಉಬಯ್ಯ್ ಆಗಿರುವರು' ಎಂದು ಪೈಗಂಬರ್(ಸ) ಹೇಳಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಖುರ್ರಾಯೇ ಉಮ್ಮತ್, ಎಂದರೆ, ಪವಿತ್ರ ಖುರ್‌ಆನ್ ಓದುವ ಈ ಸಮುದಾಯದ ಶ್ರೇಷ್ಠವ್ಯಕ್ತಿಗಳು ಎಂದು ಹೆಸರಿಸಿದ ನಾಲ್ಕು ವ್ಯಕ್ತಿಗಳಲ್ಲಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಸೇರಿದ್ದರು. ಯಾರಾದರೂ ಪವಿತ್ರ ಖುರ್‌ಆನ್ ಕಲಿಯಲು ಇಚ್ಛಿಸುವರಾದರೆ ಹಝ್ರತ್ ಉಬಯ್ಯ್‌ರಿಂದ ಕಲಿಯಲಿ ಎಂದೂ ಹೇಳಿದ್ದರು. ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನ್ ಬರೆಸುತ್ತಿದ್ದ ಹದಿನೈದು ವ್ಯಕ್ತಿಗಳಲ್ಲಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಸೇರಿದ್ದರು.

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ: ಹಝ್ರತ್ ಉಬಯ್ಯ್‌ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು – ನಿನಗೆ ನಾನು ಸೂರಃ **ಲಮ್‌ಯಕುನಿಲ್ಲಧೀನ ಕಫರೂ ಮಿನ್‌ಅಹ್‌ಲಿಲ್ ಕಿತಾಬಿ** ಎಂಬ ಅಧ್ಯಾಯ ಓದಿ ಹೇಳಬೇಕೆಂದು ಅಲ್ಲಾಹನು ನನ್ನನ್ನು ಆಜ್ಞಾಪಿಸಿದ್ದಾನೆ. 'ನನ್ನ ಹೆಸರು ಹೇಳಿ ಅಲ್ಲಾಹನು ಆಜ್ಞಾಪಿಸಿದ್ದಾನೆಯೇ? ಎಂದು ಹಝ್ರತ್ ಉಬಯ್ಯ್ ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಇದನ್ನು ಕೇಳಿ ಹಝ್ರತ್ ಉಬಯ್ಯ್(ರ) ಅತ್ತುಬಿಟ್ಟರು.

ಹಝ್ರತ್ ಅನಸ್(ರ)ರಿಂದ ಹೀಗೆ ವರದಿಯಾಗಿದೆ: ನಾಲ್ಕು ವ್ಯಕ್ತಿಗಳು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಸಂಪೂರ್ಣ ಪವಿತ್ರ ಖುರ್‌ಆನನ್ನು ಕಂಠಪಾಠ ಮಾಡಿದ್ದರು. ಇವರೆಲ್ಲರೂ ಅನ್ಸಾರ್‌ಗಳಾಗಿದ್ದರು. ಅವರ ಹೆಸರುಗಳು ಹೀಗಿವೆ – ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ), ಹಝ್ರತ್ ಮುಆಝ್ ಬಿನ್ ಜಬಲ್(ರ), ಹಝ್ರತ್ ಅಬೂ ಝೈದ್(ರ) ಮತ್ತು ಹಝ್ರತ್ ಝೈದ್ ಬಿನ್ ಸಾಬಿತ್(ರ).

ನನ್ನ ಉಮ್ಮತ್ತಿನಲ್ಲಿ ಪವಿತ್ರ ಖುರ್‌ಆನಿನ ಪಾರಾಯಣದ ಬಗ್ಗೆ ಅತ್ಯಂತ ಹೆಚ್ಚು ತಿಳಿದ ವ್ಯಕ್ತಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಆಗಿರುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಬಂದಾಗ, ಮೊತ್ತಮೊದಲು ಪೈಗಂಬರ್(ಸ)ರ ವಹ್ಯ್‌ಯನ್ನು ಬರೆದವರು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಆಗಿದ್ದರು. ಪವಿತ್ರ ಖುರ್‌ಆನಿನ ಪ್ರತಿಯೊಂದು ಅಕ್ಷರ ಹಝ್ರತ್ ಪೈಗಂಬರ್(ಸ)ರ ನಾಲಗೆಯಿಂದ ಕೇಳಿ ಹಝ್ರತ್ ಉಬಯ್ಯ್(ರ) ಕಂಠಪಾಠ ಮಾಡಿದ್ದರು. ಹಝ್ರತ್ ಪೈಗಂಬರ್(ಸ)ರು ಸಹ ಹಝ್ರತ್ ಉಬಯ್ಯ್‌ರ(ರ) ಆಸಕ್ತಿಯನ್ನು ನೋಡಿ ಅವರ ಕಲಿಕೆಯ ಕಡೆಗೆ ವಿಶೇಷವಾದ ಗಮನ ಹರಿಸುತ್ತಿದ್ದರು. ಒಂದು ಸಲ ಹಝ್ರತ್ ಪೈಗಂಬರ್(ಸ) ಫಜ್ರ್ ನಮಾಝಿನ ಇಮಾಮತ್ ವಹಿಸಿದ್ದರು. ಅದರಲ್ಲಿ ಒಂದು ಆಯತ್ತನ್ನು ಓದಲು ಮರೆತು ಬಿಟ್ಟರು. ನಮಾಝ್ ಕೊನೆಗೊಳಿಸಿದ ನಂತರ ಹಝ್ರತ್ ಪೈಗಂಬರ್(ಸ)

ಜನರೊಡನೆ ಕೇಳಿದರು: ಯಾರಾದರೂ ನನ್ನ ಖಿರಾಅತ್ ಬಗ್ಗೆ ಗಮನಿಸಿದ್ದೀರಾ? ಎಲ್ಲರೂ ಮೌನವಾಗಿದ್ದರು. ಆಗ ಹಝ್ರತ್ ಉಬಯ್ಯ್(ರ) ಹೇಳಿದರು: ಯಾ ರಸೂಲಲ್ಲಾಹ್, ನೀವು ಇಂತಿಂತಹ ಆಯತನ್ನು ಓದಿರಲಿಲ್ಲ, ಅದು ರದ್ದು ಆಯಿತೇ ಅಥವಾ ನೀವು ಓದಲು ಮರೆತು ಬಿಟ್ಟರೆ? ಹಝ್ರತ್ ಪೈಗಂಬರ್(ಸ) ಹೇಳಿದರು: ಇಲ್ಲ, ನಾನು ಅದನ್ನು ಓದಲು ಮರೆತುಬಿಟ್ಟೆ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಉಬಯ್ಯ್(ರ)ರನ್ನು ಸಂಬೋಧಿಸಿ ಹೇಳಿದರು: ನಿನಗಲ್ಲದೆ, ಬೇರೆ ಯಾರಿಗೂ ಇದರ ಕಡೆಗೆ ಗಮನ ಹೋಗಲಿಕ್ಕಿಲ್ಲ ಎಂದು ನನಗೆ ಗೊತ್ತಿತ್ತು.

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ಹೇ ಉಬಯ್ಯ್, ಪವಿತ್ರ ಖುರ್‌ಆನನ್ನು ಒಂದೇ ಖಿರಾಅತ್ ಅಥವಾ ಶೈಲಿಯಲ್ಲಿ ಓದಲು ನನಗೆ ಸಂದೇಶ ಕಳುಹಿಸಲಾಗಿತ್ತು. ನನ್ನ ಸಮುದಾಯಕ್ಕೆ ಅನುಕೂಲತೆ ಮಾಡಿಕೊಡಲು ನಾನು ಹೇಳಿದೆ. ಆಗ ಅಲ್ಲಾಹನು ಪವಿತ್ರ ಖುರ್‌ಆನನ್ನು ಎರಡು ಶೈಲಿಗಳಲ್ಲಿ ಓದಲು ಹೇಳಿದನು. ನನ್ನ ಸಮುದಾಯಕ್ಕೆ ಸೌಲಭ್ಯ ಉಂಟುಮಾಡಿಕೊಡಲು ನಾನು ಪುನಃ ಕೇಳಿಕೊಂಡೆನು. ಅನಂತರ ಮೂರನೇ ಬಾರಿ ಅಲ್ಲಾಹನು ಏಳು ಶೈಲಿಗಳಲ್ಲಿ ಓದಲು ಹೇಳಿದನು ಹಾಗೂ ಅಲ್ಲಾಹನು ಉತ್ತರ ಹೇಳಿಕೊಟ್ಟ ನನ್ನ ಪ್ರತಿ ಪ್ರಶ್ನೆಗಳ ಬದಲಿಗೆ ಒಂದೊಂದು ದುಆ ಮಾಡುವ ಹಕ್ಕನ್ನು ನನಗೆ ಕೊಡಲಾಯಿತು. ಆಗ ನಾನು ನನ್ನ ಉಮ್ಮತ್ತನ್ನು ಕ್ಷಮಿಸಲು ಎರಡು ಸಲ ಪ್ರಾರ್ಥಿಸಿದೆ. ಮೂರನೇ ದುಆ, ಹಝ್ರತ್ ಇಬ್ರಾಹೀಂ ಸಹಿತ ಎಲ್ಲ ಸೃಷ್ಟಿಗಳು ನನ್ನ ಬಳಿ ಬರುವ ದಿನಕ್ಕಾಗಿ ನಾನು ಕಾದಿರಿಸಿದೆ.

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ ಪವಿತ್ರ ಖುರ್‌ಆನಿನ ಪಾರಾಯಣದಲ್ಲಿ ಎಷ್ಟು ನೈಪುಣ್ಯವಿತ್ತೆಂದರೆ, ಹಝ್ರತ್ ಪೈಗಂಬರ್(ಸ) ಸ್ವತಃ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಂದ(ರ) ಪೂರ್ತಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ನಿಧನರಾದ ವರ್ಷ, ಪೈಗಂಬರ್(ಸ) ಹಝ್ರತ್ ಉಬಯ್ಯ್‌ರಿಗೆ ಪವಿತ್ರ ಖುರ್‌ಆನ್ ಓದಿ ಹೇಳಿದರು. 'ಉಬಯ್ಯ್‌ರಿಗೆ ಪವಿತ್ರ ಖುರ್‌ಆನ್ ಓದಿ ಹೇಳಲು ಜಿಬ್ರೀಲ್ ಹೇಳಿದ್ದರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ಕೇಳಿದರು: ಹೇ ಅಬೂ ಮುಂಧಿರ್, ನಿಮ್ಮ ಬಳಿಯಿರುವ ಅಲ್ಲಾಹನ ಗ್ರಂಥದಲ್ಲಿ ಅತ್ಯಂತ ಶ್ರೇಷ್ಠ ವಚನ ಯಾವುದೆಂದು ನಿಮಗೆ ಗೊತ್ತಿದೆಯೇ? ಅಲ್ಲಾಹನು ಮತ್ತು ಅವನ ರಸೂಲ್ ಚೆನ್ನಾಗಿ ಬಲ್ಲರು ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಪುನಃ ಕೇಳಿದರು: ನಿಮ್ಮ ಬಳಿಯಿರುವ ಅಲ್ಲಾಹನ ಗ್ರಂಥದಲ್ಲಿ ಅತ್ಯಂತ ಶ್ರೇಷ್ಠ ವಚನ ಯಾವುದೆಂದು ನಿಮಗೆ ಗೊತ್ತಿದೆಯೇ? ಆಗ ನಾನು ಹೇಳಿದೆ: **ಅಲ್ಲಾಹು ಲಾ ಇಲಾಹ ಇಲ್ಲಾಹುವಲ್ ಹಯ್ಯುಲ್ ಖಯ್ಯೂಮ್**. ಆಗ ಹಝ್ರತ್ ಪೈಗಂಬರ್(ಸ) ನನ್ನ ಎದೆಯ ಮೇಲೆ ಕೈಯಿಟ್ಟು ಹೇಳಿದರು: ಅಲ್ಲಾಹನಾಣೆ, ಹೇ ಅಬೂ ಮುಂಧಿರ್, ಈ ಅರಿವು ನಿನಗೆ ಅನುಗ್ರಹವಾಗಲಿ.

ಹಝ್ರತ್ ಪೈಗಂಬರ್(ಸ)ರ ಪರಿಶುದ್ಧ ಕಾಲಘಟ್ಟದಲ್ಲಿ ಹಝ್ರತ್ ಉಬಯ್ಯ್(ರ) ಹಝ್ರತ್ ತುಫೈಲ್ ಬಿನ್ ಅಮ್ರ್‌ದೂಸಿಗೆ(ರ) ಪವಿತ್ರ ಖುರ್‌ಆನ್ ಕಲಿಸಿದ್ದರು. ಅವರು ಒಂದು ಬಿಲ್ಲನ್ನು ಹಝ್ರತ್ ಉಬಯ್ಯ್‌ರಿಗೆ(ರ) ಕಾಣಿಕೆಯಾಗಿ ಕೊಟ್ಟರು. ಹಝ್ರತ್ ಪೈಗಂಬರ್(ಸ) ಅದನ್ನು ಮರಳಿ ಕೊಡಲು ಹೇಳಿದರು. ಇಂತಹ ಕೊಡುಗೆಯಿಂದ ದೂರವಿರಲು ಹೇಳಿದರು. ಎಂದರೆ, ಪವಿತ್ರ ಖುರ್‌ಆನ್ ಕಲಿಸಿದಕ್ಕೆ ಪ್ರತಿಫಲವಾಗಿ ಯಾವುದೇ ಗುರುದಕ್ಷಿಣೆ ಪಡೆಯಬಾರದು.

ಹಝ್ರತ್ ಉಬಯ್ಯ್(ರ) ಬದ್ರ್, ಉಹದ್, ಖಂದಕ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಭಾಗವಹಿಸಿದ್ದರು.

ಹಝ್ರತ್ ಅಬೂಬಕ್ಕರ್(ರ)ರ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನಿನ ಕ್ರಮೀಕರಿಸುವ ಮತ್ತು ಸಂಕಲನದ ಕೆಲಸ ಶುರುವಾಯಿತು. ಈ ಸೇವೆಗಾಗಿ ನಿಶ್ಚಯಿಸಲಾದ ಸಹಾಬರ ಸಂಘದ ಮೇಲ್ನೋಟಗಾರ ಹಝ್ರತ್ ಉಬಯ್ಯ್(ರ) ಆಗಿದ್ದರು. ಅವರು ಪವಿತ್ರ ಖುರ್‌ಆನಿನ ಪದಗಳನ್ನು ಹೇಳುತ್ತಾ ಹೋಗುವಾಗ, ಜನರು ಅವುಗಳನ್ನು ಬರೆಯುತ್ತಿದ್ದರು.

ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲದಲ್ಲಿ ನೂರಾರು ಪ್ರಯೋಜನಕಾರಿ ಸಂಗತಿಗಳನ್ನು ವರ್ಧಿಸಿದ್ದರು. ಅದರಲ್ಲಿ ಒಂದು ಮಜ್‌ಲಿಸ್ ಶೂರಾದ ಸ್ಥಾಪನೆಯಾಗಿತ್ತು. ಅದರಲ್ಲಿ ಖಝ್ರಜ್ ಗೋತ್ರದ ಕಡೆಯಿಂದ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಸಹ ಸದಸ್ಯರಾಗಿದ್ದರು.

ಹಝ್ರತ್ ಪೈಗಂಬರ್(ಸ)ರಿಂದ ಹದೀಸುಗಳ ಬಹುಭಾಗವನ್ನು ಕೇಳಿದ್ದ ಹಿರಿಯ ಸಹಾಬಿಯರಲ್ಲಿ ಹಝ್ರತ್ ಉಬಯ್ಯ್(ರ) ಸೇರಿದ್ದರು. ಈ ಕಾರಣದಿಂದಲೇ ಹಲವು ಸಹಾಬಿಯರು ಹದೀಸ್‌ಗಳನ್ನು ಕಲಿಯುವುದರಲ್ಲಿ ಹಝ್ರತ್ ಉಬಯ್ಯ್‌ರ ಶಿಷ್ಯರಾಗಿದ್ದಾರೆ. ಹಝ್ರತ್ ಉಮರ್ ಬಿನ್ ಖತ್ತಾಬ್(ರ), ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ), ಹಝ್ರತ್ ಉಬಾದ ಬಿನ್ ಸಾಮಿತ್(ರ), ಹಝ್ರತ್ ಅಬೂಹುರೈರ(ರ), ಹಝ್ರತ್ ಅಬೂಮೂಸಾ ಅಶ್‌ಅರಿ(ರ), ಹಝ್ರತ್ ಅನಸ್ ಬಿನ್ ಮಾಲಿಕ್(ರ), ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್(ರ), ಹಝ್ರತ್ ಸಹಲ್ ಬಿನ್ ಸಅದ್(ರ) ಮುಂತಾದವರು ಹಝ್ರತ್ ಉಬಯ್ಯ್(ರ)ರ ಹದೀಸುಗಳ ಅರಿವಿನಿಂದ ಪ್ರಯೋಜನ ಪಡೆಯುತ್ತಿದ್ದರು. ಹಝ್ರತ್ ಖೈಸ್ ಬಿನ್ ಉಬಾದ(ರ) ಹೇಳುತ್ತಾರೆ: ನಾನು ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗಿಂತ(ರ) ಶ್ರೇಷ್ಠರಾಗಿ ಯಾರನ್ನೂ ಕಂಡಿಲ್ಲ.

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನಿನ ಶೈಲಿ ಮತ್ತು ಉಚ್ಚಾರಣೆಯ ಬಗ್ಗೆ ಭಿನ್ನಾಭಿಪ್ರಾಯಗಳು ವರ್ಧಿಸಿತ್ತು. ಇದನ್ನು ನೋಡಿ ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಎಲ್ಲ ಮುಸ್ಲಿಮರನ್ನು ಒಂದು ಉಚ್ಚಾರದ ಖುರ್‌ಆನಿಗೆ ತಂದು ಸೇರಿಸಲು ಇಚ್ಛಿಸುತ್ತೇನೆ. ಖುರೈಶ್‌ಗಳು ಮತ್ತು ಅನ್ಸಾರ್‌ಗಳಲ್ಲಿ ಹನ್ನೆರಡು ವ್ಯಕ್ತಿಗಳಿಗೆ ಪವಿತ್ರ ಖುರ್‌ಆನಿನ ಮೇಲೆ ಸಂಪೂರ್ಣವಾದ ಹಿಡಿತ ಮತ್ತು ನೈಪುಣ್ಯವಿತ್ತು. ಈ ಮುಖ್ಯವಾದ ಕೆಲಸವನ್ನು ಹಝ್ರತ್ ಉಸ್ಮಾನ್(ರ) ಈ ಜನರಿಗೆ ಒಪ್ಪಿಸಿದರು. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರಿಗೆ(ರ) ಈ ಸಂಘದ ನೇತೃತ್ವ ವಹಿಸಿಕೊಟ್ಟರು. ಹಝ್ರತ್ ಉಬಯ್ಯ್(ರ) ಪವಿತ್ರ ಖುರ್‌ಆನಿನ ಪದಗಳನ್ನು

ಹೇಳುತ್ತಾ ಹೋಗುತ್ತಿದ್ದರು ಮತ್ತು ಹಝ್ರತ್ ಝೈದ್(ರ) ಅದನ್ನು ಬರೆಯುತ್ತಾ ಹೋಗುತ್ತಿದ್ದರು. ಇಂದು ಇರುವ ಪವಿತ್ರ ಖುರ್‌ಆನಿನ ಪ್ರತಿಗಳೆಲ್ಲವೂ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್‌ರ ಖಿರಾಅತ್ ಅಥವಾ ಪಠನ ಪ್ರಕಾರವಿರುವುದಾಗಿದೆ. ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ವರದಿ ಮಾಡುತ್ತಾರೆ: ನಾನು ಎಂಟು ರಾತ್ರಿಗಳಲ್ಲಿ ಪವಿತ್ರ ಖುರ್‌ಆನ್ ಪೂರ್ತಿಯಾಗಿ ಓದಿ ಮುಗಿಸುತ್ತೇನೆ.

ಹಝ್ರತ್ ಪೈಗಂಬರ್(ಸ) ಮಸ್ಜಿದ್ ನಬವಿಯ ಕಂಬಗಳಲ್ಲಿ ಖರ್ಜೂರದ ಒಂದು ಕೊಂಬೆಯೊಂದಿಗೆ ನಿಂತುಕೊಂಡು ಖುತ್‌ಬ ನೀಡುತ್ತಿದ್ದರು. ಅನಂತರ ಹಝ್ರತ್ ಪೈಗಂಬರ್(ಸ)ರಿಗೆ ಮಿಂಬರ್ ತಯಾರಿಸಲಾಯಿತು. ಪೈಗಂಬರ್(ಸ) ಜುಮಾ ದಿವಸ ಅದರಲ್ಲಿ ಕುಳಿತುಕೊಂಡು ಖುತ್‌ಬ ನೀಡಲು ಶುರುಮಾಡಿದಾಗ, ಆ ಕಂಬದಿಂದ ಕಿರುಚಾಟದ ಶಬ್ದ ಕೇಳಿ ಬಂತು, ಅದನ್ನು ಮಸೀದಿಯಲ್ಲಿದ್ದ ಎಲ್ಲರೂ ಆಲಿಸಿದರು. (ಇದು ಒಂದೇ ಸಮಯದಲ್ಲಿ ಎಲ್ಲರೂ ಒಟ್ಟಿಗೆ ಕಾಣುವಂತಹ ದಿವ್ಯದರ್ಶನದ ಒಂದು ರೂಪವಾಗಿದೆ – ಅನುವಾದಕ) ಹಝ್ರತ್ ಪೈಗಂಬರ್(ಸ) ಆ ಕಂಬದ ಬಳಿಗೆ ಬಂದರು. ಅನಂತರ ಅದನ್ನು ಆಲಂಗಿಸಿದರು. ಆಗ ಆ ಕಂಬ ಮುಗ್ಧ ಮಗುವಿನ ಹಾಗೆ ಅಳಲು ಆರಂಭಿಸಿತು. ಅದಕ್ಕೆ ಸಾಂತ್ವನ ನೀಡಿದಾಗ, ಅದು ಸಮಾಧಾನಗೊಂಡಿತು ಮತ್ತು ಅದರಿಂದ ಶಬ್ದ ಬರುವುದು ನಿಂತುಹೋಯಿತು. ನಂತರದ ಕಾಲದಲ್ಲಿ ಆ ಮಸೀದಿಯನ್ನು ಕೆಡವಿಹಾಕಿ ಅದರಲ್ಲಿ ಬದಲಾವಣೆ ಉಂಟುಮಾಡಲಾದಾಗ, ಹಝ್ರತ್ ಪೈಗಂಬರ್(ಸ) ಆ ಕಂಬದ ಆಸರೆ ಪಡೆದು ನಿಂತುಕೊಳ್ಳುತ್ತಿದ್ದರು ಎಂಬ ಒಂದೇ ಒಂದು ಕಾರಣದಿಂದ ಹಝ್ರತ್ ಉಬಯ್ಯ್ ಬಿನ್ ಕಅಬ್(ರ) ಆ ಮರದ ಕಾಂಡವನ್ನು ತೆಗೆದು ತನ್ನ ಮನೆಗೆ ಕೊಂಡುಹೋದರು. ಗೆದ್ದಲು ತಿಂದ ಕಾರಣದಿಂದ ಜೀರ್ಣಾವಸ್ಥೆಗೆ ತಲುಪಿದ್ದರೂ ಅವರು ಅದನ್ನು ತನ್ನ ಬಳಿಯೇ ಇರಿಸಿದ್ದರು. ಇದಾಗಿತ್ತು ಹಝ್ರತ್ ಉಬಯ್ಯ್‌ರಿಗೆ(ರ) ಹಝ್ರತ್ ಪೈಗಂಬರರೊಂದಿಗೆ(ಸ) ಇದ್ದ ಪ್ರೇಮದ ಸ್ಥಿತಿ.

ಹಝ್ರತ್ ಪೈಗಂಬರ್(ಸ)ರ ಸಹಾಬಿಯರಲ್ಲಿ ಆರು ಖಾರಿಗಳಿದ್ದರು. ಅವರಲ್ಲಿ ಹಝ್ರತ್ ಉಬಯ್ಯ್ ಬಿನ್ ಕಅ್‌ಬ್(ರ) ಸಹ ಸೇರಿದ್ದರು. ಹಝ್ರತ್ ಉಬಯ್ಯ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ನನಗೆ ನೂರು ದೀನಾರ್‌ಗಳು ಸಿಕ್ಕಿತ್ತು. ಹಝ್ರತ್ ಪೈಗಂಬರ್(ಸ) ಆದೇಶಿದರು: ಒಂದು ವರ್ಷ ಪೂರ್ತಿ ಅದರ ಬಗ್ಗೆ ಘೋಷಿಸು, ಮತ್ತೆ ಇನ್ನೊಂದು ವರ್ಷ ಕಾಯಬೇಕು. ಅದರ ಗುರುತನ್ನು ಹೇಳಿ ಯಾರಾದರೂ ಬಂದರೆ, ಅದನ್ನು ಅವರಿಗೆ ಕೊಡಬೇಕು, ಇಲ್ಲದಿದ್ದರೆ ಅದು ನಿನಗಾಗಿದೆ.

ಒಮ್ಮೆ ಒಬ್ಬ ವ್ಯಕ್ತಿ ತಾನು ಕಳಕೊಂಡ ಯಾವುದೋ ವಸ್ತುವಿನ ಬಗ್ಗೆ ಮಸೀದಿಯಲ್ಲಿ ಜೋರಾಗಿ ಕೇಳುತ್ತಿದ್ದ. ಹಝ್ರತ್ ಉಬಯ್ಯ್(ರ) ಕೋಪಗೊಂಡು ಹೇಳಿದರು: ಮಸೀದಿಯಲ್ಲಿ ಯಾವುದಾದರೂ ಲೌಕಿಕವಾದ ವಸ್ತುವಿಗಾಗಿ ಘೋಷಣೆ ಮಾಡುವುದು, ಮಸೀದಿಯ ಶಿಷ್ಟಾಚಾರ ಮತ್ತು ಮರ್ಯಾದೆಗೆ ಸೇರದ ಸಂಗತಿಯಾಗಿದೆ. ಹಝ್ರತ್ ಉಬಯ್ಯ್(ರ) ಹಿಜರಿ 30ರಲ್ಲಿ ನಿಧನರಾದರು. ತುಫೈಲ್, ಮುಹಮ್ಮದ್ ಅವರ ಗಂಡು ಮಕ್ಕಳಾಗಿದ್ದರು ಮತ್ತು ಉಮ್ಮೇ ಅಮ್‌ರ್ ಅವರ ಪುತ್ರಿಯಾಗಿದ್ದರು. ಈ ಮಕ್ಕಳ ತಾಯಿಯ ಹೆಸರು ಉಮ್ಮೇ ತುಫೈಲ್ ಬಿನ್ತ್ ತುಫೈಲ್ ಎಂದಾಗಿತ್ತು. ಅವರು ದೂಸ್ ಗೋತ್ರದವರಾಗಿದ್ದರು.

ಇದರೊಂದಿಗೆ ಹಝ್ರತ್ ಉಬಯ್ಯ್‌ರ ಪ್ರಸ್ತಾಪ ಮುಗಿಯಿತು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 16-10-2020*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon